ಕನ್ನಡ ಪೋಸ್ಟ್
ಸಂಪಾದಕ : ಮಂಜು ಬನವಾಸೆ
KANNADA POST
ಇದು ಸುದ್ದಿ ವಿಳಾಸ
ಕನ್ನಡ ದಿನಪತ್ರಿಕೆ
ಹಾಸನ
E-mail : kannadapostnews@gmail.com / ಕನ್ನಡ post
Price: ₹1
Vol.No.01 | Issue. 308 | Pages. 2 | Date: 01-11-2025, SATURDAY
RNI NO: KARKAN/2024/89601
Kannada Daily
ಸಂಪುಟ : 01 - ಸಂಚಿಕೆ : 308 - ಪುಟಗಳು : 2 01-11-2025 ಶನಿವಾರ
Ph: 8762954245
ದರ : ₹1

# ಬ್ಯಾಕರವಳ್ಳಿ ಗ್ರಾಮಸಭೆಯಲ್ಲಿ ಅನುದಾನ ಬಳಕೆ ಚರ್ಚೆ

## ಕಾಡಾನೆ ಸ್ಥಳಾಂತರಕ್ಕೆ ಗ್ರಾಮಸ್ಥರ ಒತ್ತಾಯ | ಮೂಲಸೌಲಭ್ಯಕ್ಕೆ ಆದ್ಯತೆ ನೀಡಲು ಸಲಹೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ: ಕಾಡಾನೆ ಹಾವಳಿ, ರಸ್ತೆ ನಿರ್ಮಾಣ, ಕುಡಿಯುವ ನೀರಿನ ಸಮಸ್ಯೆ ಹಾಗೂ 15ನೇ ಹಣಕಾಸು ಯೋಜನೆ, ನರೇಗಾ ಯೋಜನೆಯಡಿ ಅನುದಾನ ಬಳಕೆ, ಕೈಗೊಂಡಿರುವ ವಿವಿಧ ಕಾಮಗಾರಿಗಳ ಕುರಿತು ಬ್ಯಾಕರವಳ್ಳಿ ಗ್ರಾಮ ಪಂಚಾಯಿತಿ ಗ್ರಾಮಸಭೆಯಲ್ಲಿ ಗ್ರಾಮಸ್ಥರು ವಿಸ್ತೃತವಾಗಿ ಚರ್ಚಿಸಿದರು.

ಗ್ರಾಮ ಪಂಚಾಯಿತಿ ಸಭಾಂಗಣದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಸಭೆಗೆ ವಿವಿಧ ಇಲಾಖೆ ಅಧಿಕಾರಿಗಳು ಆಗಮಿಸದೆ ಇದ್ದರಿಂದ ಅಸಮಾಧಾನ ವ್ಯಕ್ತಪಡಿಸಿದ ಗ್ರಾಮಸ್ಥರು, ಕೂಡಲೇ ಅಧಿಕಾರಿಗಳ ಕರೆಸಿ ಸಭೆ ನಡೆಸುವಂತೆ ಒತ್ತಾಯಿಸಿದರು.

ಈ ವೇಳೆ ಸಭೆಗೆ ತಡವಾಗಿ ಆಗಮಿಸಿದ ವಲಯ ಅರಣ್ಯಾಧಿಕಾರಿ ಹೇಮಂತ್ ಅವರನ್ನು ಕಾಡಾನೆ ಸಮಸ್ಯೆಗೆ




ಸಂಬಂಧಿಸಿ ತರಾಟೆಗೆ ತೆಗೆದುಕೊಂಡರು. ಸುಳ್ಳಕ್ಕಿ ಗ್ರಾಮದಲ್ಲಿರುವ ವರ್ಷದಿಂದ ಬೀಡು ಬಿಟ್ಟಿರುವ ಒಂಟಿ ಕಾಡಾನೆಯನ್ನು ಕೂಡಲೇ ಸ್ಥಳಾಂತರಿಸುವಂತೆ ಒತ್ತಾಯಿಸಿದರು.

ಮೇಘಲಕೇರಿ ಗ್ರಾಮದ ರವಿ ಮಾತನಾಡಿ, ವರ್ಷದಿಂದ ನನ್ನ ತೋಟದಲ್ಲೇ ಕಾಡಾನೆ ಬೀಡು ಬಿಟ್ಟಿರುವುದರಿಂದ ತೋಟದಲ್ಲಿ ಯಾವ ಕೆಲಸ ಮಾಡಲು ಸಾಧ್ಯವಾಗುತ್ತಿಲ್ಲ. ಪಾಳುಬಿಡುವಂತಾಗಿದೆ ಕೂಡಲೇ ಕಾಡಾನೆಯನ್ನು ಸೆರೆಹಿಡಿದು ಬೇರೆಡೆಗೆ ಸ್ಥಳಾಂತರಿಸುವಂತೆ ಒತ್ತಾಯಿಸಿದರು. ಇದಕ್ಕೆ ಗ್ರಾಮಸ್ಥರು ಒಕ್ಕೊರಲಿನಿಂದ ಧ್ವನಿಗೂಡಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಆರ್‌ಎಫ್‌ಒ ಹೇಮಂತ್, ಕಾಡಾನೆ ಸ್ಥಳಾಂತರದ ಬಗ್ಗೆ ಮೇಲಧಿಕಾರಿ ಗಮನಕ್ಕೆ ತರಲಾಗಿದೆ.

### ಸಭೆಯಲ್ಲಿ ದೂರುಗಳ ಸುರಿಮಳೆ

ಗ್ರಾಮಸಭೆಯಲ್ಲಿ ನೂರಾರು ಜನರು ಭಾಗವಹಿಸಿ ನರೇಗಾ ಯೋಜನೆಯಡಿ ವೈಯಕ್ತಿಕ ಸೌಲಭ್ಯ ಪಡೆಯಲು ನೂರಾರು ಅರ್ಜಿಗಳನ್ನು ಸ್ವೀಕಾರ ಮಾಡಿದರು. ಮನೆ, ರಸ್ತೆ, ಚರಂಡಿ, ದನದ ಕೊಟ್ಟಿಗೆ, ಬಾವಿ, ಕುರಿ ಸಾಕಾಣಿಕೆ ಶೆಡ್, ಅಡಿಕೆ, ಮೆಣಸು, ಕಾಫಿ ತೋಟದಲ್ಲಿ ನೀರು ಗುಂಡಿ ನಿರ್ಮಾಣಕ್ಕೆ ಸಹಾಯಧನ ಒದಗಿಸುವಂತೆ ಕೋರಿ ಅರ್ಜಿ ಸಲ್ಲಿಸಿದರು.

ನಾಲ್ಕು ಇಟಿಎಫ್ ಸಿಬ್ಬಂದಿಯನ್ನು ಕಾಡಾನೆ ಚಲನವಲದ ಮೇಲೆ ನಿಗಾ ವಹಿಸಿದ್ದಾರೆ. ರಾತ್ರಿ ಪಾಳಿಯಲ್ಲೂ ಕಾಡಾನೆ ಚಲನವಲದ ಬಗ್ಗೆ ನಿಗಾವಹಿಸಲು ಸಿಬ್ಬಂದಿ ನಿಯೋಜಿಸಲಾಗುವುದು ಎಂದು ಭರವಸೆ ನೀಡಿದರು.

ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ನಿಂಗಯ್ಯ ಮಾತನಾಡಿ, ನರೇಗಾ ಮತ್ತು 15ನೇ ಹಣಕಾಸು ಯೋಜನೆಯಡಿ ಕೈಗೊಂಡಿರುವ ಕಾಮಗಾರಿಗಳ ವಿವರ ನೀಡಿದರು. ಅಂಗವಿಕಲರಿಗೆ ಮೀಸಲಾದ ಅನುದಾನ ಹಾಗೂ ಎಸ್‌ಸಿಎಸ್‌ಪಿ, ಟಿಎಸ್‌ಪಿ ಯೋಜನೆ ಅನುದಾನದಲ್ಲಿ ಸೂಕ್ತ ಸ್ಥಳದಲ್ಲಿ ಕಾಮಗಾರಿ ಕೈಗೊಳ್ಳದ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದ ಸಾರ್ವಜನಿಕರು, ಸ್ಥಳೀಯವಾಗಿ ಗ್ರಾಮಸ್ಥರಿಂದ ಮಾಹಿತಿ ಪಡೆದು ಸೂಕ್ತ ಸ್ಥಳದಲ್ಲಿ ಕಾಮಗಾರಿ ನಡೆಸಬೇಕು. ಎಲ್ಲಂದರಲ್ಲಿ ಬೇಕಾಬಿಟ್ಟಿಯಾಗಿ ಮಾಡದಂತೆ ಸಲಹೆ ನೀಡಿದರು. ಅದೇ ರೀತಿ ನರೇಗಾ ಯೋಜನೆಯಡಿ ರಸ್ತೆ ಕಾಮಗಾರಿ ಕೈಗೊಳ್ಳುವ ಸಂದರ್ಭದಲ್ಲಿ ಈ ಹಿಂದೆ ರಸ್ತೆ ಕಾಮಗಾರಿ ಎಲ್ಲಿ ಅರ್ಧಕ್ಕೆ ನಿಂತಿರುತ್ತದೆ ಅಲ್ಲಿಂದಲೇ ಪ್ರಾರಂಭ ಮಾಡಬೇಕು. ಅಗತ್ಯ ಇರುವ ಕಡೆಗಳಲ್ಲಿ ಮತ್ತು ಹೆಚ್ಚು ಜನರು ತಿರುಗಾಡುವ ಕಡೆಗಳಲ್ಲಿ ರಸ್ತೆ ನಿರ್ಮಾಣ ಮಾಡಬೇಕು. ಇನ್ನೂ ಹಲವು ಕಡೆಗಳಲ್ಲಿ ರಸ್ತೆ ಕಾಮಗಾರಿ ನಡೆಯಬೇಕಿದ್ದು, ಅವುಗಳನ್ನು ಕ್ರಿಯಾ ಯೋಜನೆಯಡಿ ಸೇರಿಕೊಳ್ಳುವಂತೆ ಒತ್ತಾಯಿಸಿದರು. ಇದೇ ವೇಳೆ ಕುಡಿಯುವ ನೀರು, ಚರಂಡಿ ವ್ಯವಸ್ಥೆ, ಬೀದಿ ದೀಪ, ರಸ್ತೆ ನಿರ್ಮಾಣ ಸೇರಿ ಮೂಲಸೌಲಭ್ಯಗಳನ್ನು ಕಲ್ಪಿಸುವಂತೆ ಆಗ್ರಹಿಸಲಾಯಿತು.

ಗ್ರಾಮ ಪಂಚಾಯಿತಿ ಅಧ್ಯಕ್ಷ ಕೆ.ವಿ.ರಂಗನಾಥ, ಉಪಾಧ್ಯಕ್ಷೆ ಭಾಗ್ಯ, ನೋಡಲ್ ಅಧಿಕಾರಿ ಹರೀಶ್, ಸದಸ್ಯರಾದ ಚನ್ನಯ್ಯ, ಜಗದೀಶ್, ಎನ್.ಎಲ್.ದ್ವಾರಕೀಶ್, ನಾಗೇಶ್, ಅಂಬಿಕ, ನಾಗೇಶ್, ಸರಿತ, ಭಾಗ್ಯ, ಜೆ.ಜೆ.ಜಗದೀಶ್, ಪಲ್ಲವಿ, ಶೀಲಾಮಣಿ, ಎ.ವಿ.ನಂದೀಶ್ ಹಾಜರಿದ್ದರು.

# ರಾಷ್ಟ್ರೀಯ ಏಕತಾ ದಿನ ಪೊಲೀಸರಿಂದ ಮ್ಯಾರಥಾನ್ ಓಟ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ: ರಾಷ್ಟ್ರೀಯ ಏಕತಾ ದಿನದ ಅಂಗವಾಗಿ ಪೊಲೀಸ್ ಸಿಬ್ಬಂದಿ ಪಟ್ಟಣದಲ್ಲಿ ಮ್ಯಾರಥಾನ್ ಓಟದಲ್ಲಿ ಪಾಲ್ಗೊಂಡರು.

ಪಟ್ಟಣದ ಸಕಲೇಶ್ವರಸ್ವಾಮಿ ದೇವಸ್ಥಾನದಿಂದ ಮ್ಯಾರಾಥಾನ್‌ಗೆ ಚಾಲನೆ ನೀಡಿದ ವೃತ್ತ ನಿರೀಕ್ಷಕ ಮಹಾಂತೇಶ್ ಪಾಟೀಲ್ ಮಾತನಾಡಿ, ಅ. 31ರದು ಸರ್ದಾರ್ ವಲ್ಲಭಭಾಯಿ ಪಟೇಲ್ ಜನ್ಮದಿನವಾಗಿದೆ. ಈ ಹಿನ್ನೆಲೆಯಲ್ಲಿ ರಾಷ್ಟ್ರೀಯ ಏಕತಾ ದಿನದ ಅಂಗವಾಗಿ ಸರ್ಕಾರದ ನಿರ್ದೇಶನದಂತೆ ಜನಜಾಗೃತಿ ಮೂಡಿಸುವ ಉದ್ದೇಶದಿಂದ ಓಟ ಹಮ್ಮಿಕೊಳ್ಳಲಾಗಿದೆ. ಪಟ್ಟಣದ ಸಕಲೇಶ್ವರಸ್ವಾಮಿ ದೇವಸ್ಥಾನದಿಂದ ಕೆಂಪೇಗೌಡ ಪ್ರತಿಮೆ ವರೆಗೆ ಸುಮಾರು 3 ಕಿ.ಮೀ. ದೂರ ಮ್ಯಾರಾಥಾನ್ ಓಟ ಓಡಲಾಗಿದೆ ಎಂದರು.

ನಗರಠಾಣೆ ಆರಕ್ಷಕ ವೃತ್ತ ನಿರೀಕ್ಷಕ ವನರಾಜ್, ಗ್ರಾಮಾಂತರ ಠಾಣೆ ಪಿಎಸ್‌ಐ ಪ್ರಸನ್ನ, ನಗರ ಠಾಣೆ ಎಎಸ್‌ಐ ಕೃಷ್ಣಪ್ಪ ಇತರರಿದ್ದರು.

# ಅಂಬೇಡ್ಕರ್ ಕಂಚಿನ ಪ್ರತಿಮೆಗೆ ಅದ್ದೂರಿ ಸ್ವಾಗತ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಚನ್ನರಾಯಪಟ್ಟಣ: ಪಟ್ಟಣದ ತಾಲೂಕು ಕಚೇರಿ ಎದುರು ಪ್ರತಿಷ್ಠಾಪನೆ ಆಗಲಿರುವ ಡಾ.ಬಿ.ಆರ್. ಅಂಬೇಡ್ಕರ್ ಅವರ ಕಂಚಿನ ಪ್ರತಿಮೆ ಶುಕ್ರವಾರ ಜಿಲ್ಲೆಯ ಗಡಿ ಕಿರಿಸಾವೆಗೆ ಆಗಮಿಸಿದಾಗ ಜನಪ್ರತಿನಿಧಿಗಳು, ಸಂಘಟನೆಗಳ ಕಾರ್ಯಕರ್ತರು ಹೂವಿನ ಹಾರಗಳನ್ನು ಹಾಕಿ, ಪ್ರಮುಖ ರಸ್ತೆಯಲ್ಲಿ ತೆರೆದ ವಾಹನದಲ್ಲಿ ವಿಜೃಂಭಣೆಯಿಂದ ಮೆರವಣಿಗೆ ನಡೆಸುವ ಮೂಲಕ ಸ್ವಾಗತಿಸಿದರು. ಬೆಂಗಳೂರಿನಿಂದ ಪ್ರತಿಮೆ ಹೊತ್ತ ಲಾರಿ ಮಧ್ಯಾಹ್ನ 1 ಗಂಟೆಗೆ ಮೇಟಿಕೆರೆ ವೃತ್ತಕ್ಕೆ ಆಗಮಿಸಿದಾಗ ಶಾಸಕ ಸಿ.ಎನ್. ಬಾಲಕೃಷ್ಣ, ಮಾಜಿ ಎಂಎಲ್‌ಸಿ ಎಂ.ಎ.



ಗೋಪಾಲಸ್ವಾಮಿ ಸೇರಿದಂತೆ ಹಲವು ಜನಪ್ರತಿನಿಧಿಗಳು, ದಲಿತ ಸಂಘಟನೆಗಳ ಪದಾಧಿಕಾರಿಗಳು ಪುಷ್ಪವೃಷ್ಟಿ ಮಾಡಿ ಸ್ವಾಗತಿಸಿದರು.

ಜೈ ಭೀಮ್ ಘೋಷಣೆಗಳನ್ನು ಕೂಗುತ್ತಾ, ನಾಸಿಕ್ ಡೋಲು ಸದ್ದಿಗೆ ಕುಣಿಯುತ್ತಾ, ಪ್ರತಿಮೆ ಮೆರವಣಿಗೆಯನ್ನು ಪ್ರಾರಂಭಿಸಿದರು. ರಾಜ್ಯ ಹೆದ್ದಾರಿ 8 ರಲ್ಲಿ ಸಾಗಿ, ಶ್ರೀಚೌಡೇಶ್ವರಿ ವೃತ್ತ, ಗ್ರಾಮ ಪಂಚಾಯಿತಿ ರಸ್ತೆ, ಶ್ರೀಕಂಠಯ್ಯ ವೃತ್ತದ ಮೂಲಕ ರಾಷ್ಟ್ರೀಯ ಹೆದ್ದಾರಿ ಮಾರ್ಗವಾಗಿ ಪ್ರತಿಮೆ ಇರಿಸಿದ ಲಾರಿ ಚನ್ನರಾಯಪಟ್ಟಣದ ಕಡೆಗೆ ಸಾಗಿತು.

# ಅಂಬೇಡ್ಕರ್ ಜೀವನ ಚರಿತ್ರೆ ಪ್ರತಿಯೊಬ್ಬರು ಅರಿಯಿರಿ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ: ಬಾಬಾಸಾಹೇಬ್ ಅಂಬೇಡ್ಕರ್ ನೀಡಿದ ಸಂವಿಧಾನದ ಬಲದಿಂದ ಪ್ರತಿಯೊಬ್ಬರಿಗೂ ರಾಜಕೀಯ, ಸಾಮಾಜಿಕ ಹಾಗೂ ಶೈಕ್ಷಣಿಕ ಹಕ್ಕು ದೊರೆತಿದೆ ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ತಾಲೂಕಿನ ಮಳಲಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೋಗರವಳ್ಳಿ ಗ್ರಾಮದಲ್ಲಿ ಅಂಬೇಡ್ಕರ್ ಸಮುದಾಯ ಭವನ ಉದ್ಘಾಟಿಸಿ ಮಾತನಾಡಿ, ಬಾಬಾಸಾಹೇಬ್ ಅಂಬೇಡ್ಕರ್ ಅವರು ಸಂವಿಧಾನ ರಚನಾ ಸಮಿತಿಯ ಅಧ್ಯಕ್ಷರಾಗಿದ್ದರೂ ತಮ್ಮ ಸೇವೆಗೆ ಒಂದು ರೂಪಾಯಿ ಸ್ವೀಕರಿಸಲಿಲ್ಲ. ಅವರ ಸೇವೆ ನಿಷ್ಕಾಮ ಸೇವೆಯ ಮಾದರಿ. ಇಂದಿನ ಯುವಕರು ಅವರ ಜೀವನ ಚರಿತ್ರೆಯನ್ನು ಓದಿ ಪ್ರೇರಣೆ ಪಡೆಯಬೇಕು ಎಂದು ಹೇಳಿದರು.

ಅಂಬೇಡ್ಕರ್ ನೀಡಿದ ಸಂವಿಧಾನದಿಂದಲೇ ಭಾರತ ಪ್ರಪಂಚದ ಅತಿ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾಗಿದೆ.

ಸಂವಿಧಾನವೇ ಪ್ರತಿಯೊಬ್ಬ ನಾಗರಿಕನಿಗೂ ಸಮಾನ ಹಕ್ಕು ನೀಡಿದೆ. ನಾನು ಶಾಸಕರಾಗಿ ಮಾಡುವ ಪ್ರತಿಯೊಂದು ಕೆಲಸ ಜನರ ಕಲ್ಯಾಣಕ್ಕೆ ತಲುಪಬೇಕು ಎಂಬುದು ನನ್ನ ಧ್ಯೇಯ. ಸಕಲೇಶಪುರ ತಾಲೂಕಿನ ಎಲ್ಲೆಡೆ ನಡೆಯುತ್ತಿರುವ ಅಭಿವೃದ್ಧಿ ಕಾರ್ಯಗಳನ್ನು ಪೂರ್ಣಗೊಳಿಸಲು ಬದ್ಧರಾಗಿದ್ದೇನೆ, ಪ್ರತಿ ಕ್ಷೇತ್ರದಲ್ಲೂ ಶೇಕಡಾ ನೂರು ಅಭಿವೃದ್ಧಿ ಸಾಧಿಸಲು ಕ್ರಮ ಕೈಗೊಂಡಿದ್ದೇನೆ. ಎಲ್ಲ ಸಮಾಜಗಳ ಮಧ್ಯೆ ಒಗ್ಗಟ್ಟು ಮತ್ತು ಸಹಕಾರ ಬೆಳೆಸಲು ಪ್ರಯತ್ನಿಸುತ್ತಿದ್ದೇನೆ ಎಂದು ಹೇಳಿದರು. ಅಂಬೇಡ್ಕರ್ ಅವರು ಕೇವಲ ಒಂದು ವರ್ಗದ ನಾಯಕನಲ್ಲ, ಇಡೀ ಮಾನವಕೋಟಿಗೆ ಮಾರ್ಗದರ್ಶಕ. ಪ್ರತಿಯೊಂದು ಜಾತಿ, ಧರ್ಮಕ್ಕೂ ಗೌರವ ದೊರೆತಾಗ ಮಾತ್ರ ಅವರ ಕನಸುಗಳು ನನಸಾಗುತ್ತವೆ. ಸಮಾಜದಲ್ಲಿ ಎಲ್ಲರೂ ಸಮಾನವಾಗಿ ಬದುಕುವ ಸಂಸ್ಕೃತಿ ಬೆಳೆಯಬೇಕು ಎಂದು ಹೇಳಿದರು. ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಮೋಹನ್, ಗ್ರಾಪಂ ಅಧ್ಯಕ್ಷೆ ಗಾಯಿತ್ರಿ, ಉಪಾಧ್ಯಕ್ಷ ಮದನ್ ಕುಮಾರ್, ಪಿಡಿಒ ರಂಗಸ್ವಾಮಿ, ಗ್ರಾಪಂ ಸದಸ್ಯರಾದ ರವಿ, ಯೋಗೇಶ್, ಅಣ್ಣಮ್ಮ, ಮಹಾದೇವಮ್ಮ, ಮುಖಂಡರಾದ ತಾಗ್ಯರಾಜ್, ಎಚ್.ಆರ್ ಕುಮಾರ್, ಷಣ್ಮುಖ ಇತರರಿದ್ದರು.

# 2.50 ಕೋಟಿ ರೂ. ಲಾಭದಲ್ಲಿ ಚನ್ನರಾಯಪಟ್ಟಣ ಟಿಎಪಿಸಿಎಂಎಸ್



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಚನ್ನರಾಯಪಟ್ಟಣ: ನಷ್ಟದ ಸುಳಿಯಲ್ಲಿದ್ದ ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ ಪ್ರಸ್ತುತ 2.50 ಕೋಟಿ ರೂ. ನಿವ್ವಳ ಲಾಭದಲ್ಲಿದೆ ಎಂದು ಶಾಸಕ ಸಿ.ಎನ್.ಬಾಲಕೃಷ್ಣ ಹೇಳಿದರು. ಟಿಎಪಿಸಿಎಂಎಸ್ ಅಧ್ಯಕ್ಷರಾಗಿ ಹೆಚ್.ಆರ್.ವೆಂಕಟೇಶಮೂರ್ತಿ ಹಾಗೂ ಉಪಾಧ್ಯಕ್ಷರಾಗಿ ತಾರಾಮಣಿ ಆನಂದ್ ಅವಿರೋಧ ಆಯ್ಕೆಯಾದ ಹಿನ್ನೆಲೆಯಲ್ಲಿ ಅಭಿನಂದಿಸಿ ಮಾತನಾಡಿ, ಟಿಎಪಿಸಿಎಂಎಸ್ ಲಾಭದ ಹಾದಿಯಲ್ಲಿ ಸಾಗಲು ಎರಡು ದಶಕಗಳ ಜೆಡಿಎಸ್ ಅಧಿಕಾರ ಕಾರಣ. ನಿರ್ವಹಣೆ ಸಾಧ್ಯವಾಗದೆ ಜಪ್ತಿ ಹಂತಕ್ಕೆ ಬಂದಿದ್ದ ಸಂಘ ಈಗ 60 ಲಕ್ಷ ರೂ. ಠೇವಣಿ, 1.50 ಕೋಟಿ ರೂ. ದುಡಿಯುವ ಬಂಡವಾಳದ ಜೊತೆಗೆ 2.5 ಕೋಟಿ ರೂ. ನಿವ್ವಳ ಆಸ್ತಿ ಹೊಂದುವ ಮೂಲಕ ಲಾಭದಲ್ಲಿದೆ ಎಂದರು.

ಕಳೆದ ತಿಂಗಳು ನಡೆದ ನಿರ್ದೇಶಕರ ಆಯ್ಕೆ ಚುನಾವಣೆಯಲ್ಲಿ ಎಲ್ಲಾ 14 ಸ್ಥಾನಗಳು ಜೆಡಿಎಸ್ ಪಾಲಾಗಿವೆ. ಸಿ.ಎನ್.ಪುಟ್ಟಸ್ವಾಮಿಗೌಡ ರಾಜ್ಯ ಮಾರಾಟ ಮಹಾ ಮಂಡಳದ ನಿರ್ದೇಶಕರಾದ ಮೇಲೆ ತಾಲ್ಲೂಕಿಗೆ 1 ಕೋಟಿ ರೂ. ಅನುದಾನವನ್ನು ಮಾರಾಟ ಮಂಡಳದಿಂದ ಕೊಡಿಸಿದ್ದು, ಟಿಎಪಿಸಿಎಂಎಸ್‌ನ ಕಟ್ಟಡ ನಿರ್ಮಾಣಕ್ಕಾಗಿ 35 ಲಕ್ಷ ರೂ. ಒದಗಿಸಿದ್ದಾರೆ ಎಂದು ತಿಳಿಸಿದರು.

### ಅವಿರೋಧ ಆಯ್ಕೆ

ಟಿಎಪಿಸಿಎಂಎಸ್ ಅಧ್ಯಕ್ಷ ಸ್ಥಾನಕ್ಕೆ ಎ-ತರಗತಿಯಿಂದ ನಿರ್ದೇಶಕರಾಗಿ ಆಯ್ಕೆಯಾಗಿದ್ದ ವೆಂಕಟೇಶಮೂರ್ತಿ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಮಹಿಳಾ ಮೀಸಲು ಕ್ಷೇತ್ರದಿಂದ ಸ್ಪರ್ಧಿಸಿ ನಿರ್ದೇಶಕಾಗಿದ್ದ ಡಿ.ಚಿಕ್ಕೇನಹಳ್ಳಿ ಗ್ರಾಮದ ತಾರಾಮಣಿ ಆನಂದ್ ಮಾತ್ರ ನಾಮಪತ್ರ ಸಲ್ಲಿಸಿದ್ದರು. ಚುನಾವಣಾಧಿಕಾರಿ ತಹಶೀಲ್ದಾರ್ ಶಂಕರಪ್ಪ ಅವರು ಆಯ್ಕೆ ಘೋಷಿಸಿದರು.

ನೂತನ ಅಧ್ಯಕ್ಷ ಹೆಚ್.ಆರ್.ವೆಂಕಟೇಶಮೂರ್ತಿ, ಉಪಾಧ್ಯಕ್ಷೆ ತಾರಾಮಣಿ ಆನಂದ್ ಮಾತನಾಡಿದರು. ರಾಜ್ಯ ಮಾರಾಟ ಮಹಾಮಂಡಳದ ನಿರ್ದೇಶಕ ಸಿ.ಎನ್ .ಪುಟ್ಟಸ್ವಾಮಿಗೌಡ, ಜೆಡಿಎಸ್ ತಾಲ್ಲೂಕು ಅಧ್ಯಕ್ಷ ಪರಮ ಕೃಷ್ಣೇಗೌಡ, ರಾಜ್ಯ ಮಾರಾಟ ಮಹಾಮಂಡಳದ ನಿರ್ದೇಶಕ ಸಿ.ಎನ್.ಪುಟ್ಟಸ್ವಾಮಿಗೌಡ, ನಿಕಟಪೂರ್ವ ಅಧ್ಯಕ್ಷ ಎಂ.ಆರ್. ಅನಿಲ್ ಕುಮಾರ್, ನಿರ್ದೇಶಕರಾದ ಪರಮ ಕೃಷ್ಣೇಗೌಡ, ಎಂ.ಎನ್.ಬೋರೇಗೌಡ, ಕೆ.ಎನ್.ನಾಗರಾಜು ತೋಟಿ, ನೆಟ್ಟೆಕೆರೆ ನಾಗರಾಜು, ತರಬೇನಹಳ್ಳಿ ನಂಜುಡೇಗೌಡ, ಮಮತ ಜಯಣ್ಣ, ರಮೇಶ್ ಕುಂಬಾರಹಳ್ಳಿ, ಸಿ.ಜಿ.ಜಗದೀಶ್, ರವಿಕುಮಾರ್ ಕುಂಬಾರಹಳ್ಳಿ, ಪಿ.ಉಮೇಶ್ ಇತರರಿದ್ದರು.

# ದಶಕಗಳಿಂದ ಡಾಂಬರು ಕಾಣದ ಹೊಸನಗರ ರಸ್ತೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಬೇಲೂರು: ಪಟ್ಟಣದಿಂದ ಕೂಗಳತೆ ದೂರದಲ್ಲಿರುವ ಬುದ್ಧ ಪ್ರೌಢಶಾಲಾ ರಸ್ತೆಯಿಂದ ಹೊಸನಗರಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ದಶಕಗಳಿಂದಲೂ ಡಾಂಬರು ಹಾಗೂ ಕಾಂಕ್ರಿಟ್ ಕಾಣದೇ ಸಂಚಾರಕ್ಕೆ ಪರದಾಡುವಂತಾಗಿದೆ.

ಶಾಲೆ ಕಾಲೇಜಿಗೆ ತೆರಳುವ ವಿದ್ಯಾರ್ಥಿಗಳು ಪ್ರತಿನಿತ್ಯ ಇದೇ ರಸ್ತೆಯಲ್ಲಿ ಓಡಾಡುತ್ತಾರೆ.

ಬೃಹತ್ ಗುಂಡಿಗಳಿಂದ ಕೂಡಿರುವ ರಸ್ತೆಯಲ್ಲಿ ಮಳೆ ಬಂತೆಂದರೆ ನೀರು ತುಂಬಿಕೊಂಡು ಹಳ್ಳದಂತೆ ಭಾಸವಾಗುತ್ತದೆ.

ನಾನಾ ಕಡೆ ಕಲ್ಲು ಮೇಲೆದ್ದು ಸಂಚಾರಕ್ಕೆ ತೊಂದರೆಯಾಗುತ್ತಿದೆ. ರಸ್ತೆಯ ಬದಿ ನಾನಾ ಜಾತಿಯ ಗಿಡಗಂಟಿಗಳು ಬೆಳೆದಿರುವ ಪರಿಣಾಮ ರಸ್ತೆ ಸಂಚಾರ ಮಾಡುವುದೇ ಕಷ್ಟವಾಗುತ್ತಿದೆಯೆಂದು ಸ್ಥಳೀಯರು ಅವಲತ್ತುಕೊಂಡರು.

ಈ ರಸ್ತೆಯಲ್ಲಿ ಜನರು ಹೆಚ್ಚಾಗಿ ಸಂಚರಿಸುತ್ತಾರೆ.

ಈಗ ರಸ್ತೆ ತೀರಾ ಹಾಳಾಗಿರುವ ಪರಿಣಾಮ ವಾಹನ ಸವಾರರು ಮತ್ತು ಸಾರ್ವಜನಿಕರು ಹರಸಹಾಸ ಪಡುವ



ಸ್ಥಿತಿಯಾಗಿದೆ. ಸಮಸ್ಯೆಗೆ ಪರಿಹಾರ ಕಲ್ಪಿಸಬೇಕಿದ್ದ ಬಂಟೇನಹಳ್ಳಿ ಗ್ರಾಮ ಪಂಚಾಯಿತಿ ಚುನಾಯಿತ ಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಜಾಣ ಮೌನ ವಹಿಸಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ.


ಶಾಂತಿನಗರ ನಿವಾಸಿ ಸುಮಾ ಮಾತನಾಡಿ, ಶಾಂತಿನಗರಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯ ಅಭಿವೃದ್ಧಿ ದಶಕಗಳಿಂದಲೂ ನನೆಗುದಿಗೆ ಬಿದ್ದಿದೆ. ರಸ್ತೆಯಲ್ಲಿ ಕಾಡುಗಲ್ಲು ಮೇಲೆದ್ದಿರುವ ಹಿನ್ನೆಲೆಯಲ್ಲಿ ಪ್ರಯಾಣಿಕರು ರಸ್ತೆಯಲ್ಲಿ ಸಂಚಾರ ನಡೆಸುವುದು ಕಷ್ಟವಾಗುತ್ತಿದೆ. ಅದಲ್ಲದೇ ಇದೆ ರಸ್ತೆಯಲ್ಲಿ ಹೊಸನಗರ ಬಡಾವಣೆಯಿಂದ ಬುದ್ಧ ಶಾಲೆಗೆ ವಿದ್ಯಾರ್ಥಿಗಳು ಕೆಸರು ರಸ್ತೆಯಲ್ಲಿ ತಿರುಗಾಡುತ್ತಾರೆ.

ಇಲ್ಲಿನ ನಿವಾಸಿಗಳು ಪ್ರತಿದಿನದ ಕೆಲಸಕ್ಕಾಗಿ ಈ ರಸ್ತೆಯಲ್ಲಿ ತಿರುಗಾಡುವಾಗ ಕೆಲವರು ಬೈಕ್‌ನಿಂದ ಬಿದ್ದು ಆಸ್ಪತ್ರೆ ಸೇರಿರುವ ಉದಾಹರಣೆಗಳು ಸಾಕಷ್ಟಿವೆ. ಬೇಲೂರು ಪಟ್ಟಣಕ್ಕೆ ಕೂಗಳತೆ ದೂರದಲ್ಲಿರುವ ಈ ರಸ್ತೆ ಇಷ್ಟೊಂದು ಹದಗೆಟ್ಟಿದ್ದರೂ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಗಮನಿಸದೆ ಇರುವುದು ದುರಂತ ಎಂದು ಬೇಸರ ವ್ಯಕ್ತಪಡಿಸಿದರು.

# ಪತ್ರಿಕೋದ್ಯಮದಲ್ಲಿ ವೃತ್ತಿ ಬದುಕಿಗೆ ಅಧಿಕ ಅವಕಾಶ

ಹಾಸನ: ಪತ್ರಿಕೋದ್ಯಮ ವಿಷಯ ಅಧ್ಯಯನ ಮಾಡುವ ವಿದ್ಯಾರ್ಥಿಗಳಿಗೆ ವೃತ್ತಿ ಅವಕಾಶಗಳು ಹೆಚ್ಚಾಗಿದ್ದು, ಪದವಿ ಹಂತದಲ್ಲಿ ಈ ವಿಷಯವನ್ನು ಆಯ್ಕೆ ಮಾಡಿಕೊಳ್ಳುವುದರಿಂದ ವೃತ್ತಿ ಜೀವನಕ್ಕೆ ಸಹಕಾರಿಯಾಗಲಿದೆ ಎಂದು ನಗರದ ಎಂ.ಜಿ. ರಸ್ತೆ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥ ಎನ್.ಮನೋಹರ್ ಹೇಳಿದರು.

ನಗರದ ಆರ್‌ಸಿ ರಸ್ತೆ ಗಂಧದ ಕೋಠಿ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದಿಂದ ವತಿಯಿಂದ ಹಮ್ಮಿಕೊಂಡಿದ್ದ ವಿಶೇಷ ಉಪನ್ಯಾಸ ಹಾಗೂ ಮಾಧ್ಯಮ ಸಂಬಂಧಿತ ವಿವಿಧ ಸ್ಪರ್ಧೆಗಳ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ನವ ಮಾಧ್ಯಮಗಳು ಜನರನ್ನು ಆಕರ್ಷಿಸುತ್ತಿದ್ದು, ಯುವ ಸಮುದಾಯ ಪತ್ರಿಕೋದ್ಯಮ ಶಿಕ್ಷಣ ಪಡೆಯುವುದರಿಂದ ಇಂತಹ ನವ ಮಾಧ್ಯಮಗಳನ್ನು ಬಳಸಿಕೊಂಡು ಸಮಾಜದಲ್ಲಿ ಆಗು ಹೋಗುಗಳನ್ನು ಸರಿಪಡಿಸುವಲ್ಲಿ ಶ್ರಮಿಸಬಹುದು. ಮುದ್ರಣ ಹಾಗೂ ದೃಶ್ಯ ಮಾಧ್ಯಮಗಳನ್ನು ಆರಂಭಿಸಬೇಕಾದರೆ ಸಾಕಷ್ಟು ಹಣದ ಅವಶ್ಯಕತೆ ಇದೆ. ಆದರೆ




ನವ ಮಾಧ್ಯಮಗಳ ಆರಂಭಿಸಲು ಹಾಗೂ ಬ್ರಾಡ್‌ಕಾಸ್ಟ್ ಮಾಧ್ಯಮಗಳನ್ನು ಅತ್ಯಂತ ಕಡಿಮೆ ವೆಚ್ಚದಲ್ಲಿ ಆರಂಭಿಸಿ ಇಂದು ಹಣ ಸಂಪಾದನೆ ಮಾಡುವುದರೊಂದಿಗೆ ಇತರರಿಗೂ ಕೆಲಸ ಒದಗಿಸಿಕೊಡಬಹುದಾಗಿದೆ. ಪಿಯುಸಿ ಮುಗಿಸಿದ ಯಾವುದೇ ಯುವಕರು ಪದಯಲ್ಲಿ ಪತ್ರಿಕೋದ್ಯಮ ಶಿಕ್ಷಣ ಪಡೆದುಕೊಳ್ಳಬಹುದಾಗಿದೆ. ಮಾಧ್ಯಮ ಶಿಕ್ಷಣ ಪಡೆಯುವುದರ ಮೂಲಕ ಸಮಾಜದಲ್ಲಿ ಒಂದೊಳ್ಳೆ ಉತ್ತಮ ಹಾಗೂ ಗಟ್ಟಿತನದ ಪತ್ರಿಕೋದ್ಯಮ ನಡೆಸಲು ಸಹಕಾರಿಯಾಗಲಿದೆ ಎಂದು ಹೇಳಿದರು.

ಪದವಿ ಮುಗಿಸಿದ ಕೂಡಲೇ ವೃತ್ತಿ ಆರಂಭಿಸಬೇಕೆಂಬ ಹಲವು ಯುವಕರಿಗೆ ಈ ಪತ್ರಿಕೋದ್ಯಮ ವಿಷಯ ಸಹಕಾರಿಯಾಗಿದೆ. ಹೆಣ್ಣು ಮಕ್ಕಳಿಗೆ ಸಾಕಷ್ಟು ವೃತ್ತಿ ಅವಕಾಶಗಳು ಪತ್ರಿಕೋದ್ಯಮದಲ್ಲಿ ಇದ್ದು, ಅವರುಗಳು ಇದನ್ನು ಸದ್ಬಳಕೆ ಮಾಡಿಕೊಳ್ಳಬೇಕು. ಶೇ.100 ರಷ್ಟು ಮಂದಿಯಲ್ಲಿ ಶೇ.23 ರಷ್ಟು ಮಂದಿ ಮಾತ್ರ ದೇಶದಲ್ಲಿ ಉನ್ನತ ಶಿಕ್ಷಣ ಪಡೆದುಕೊಳ್ಳುತ್ತಿರುವವರು ಎಂದು ತಿಳಿದುಬಂದಿದ್ದು, ಆ ಶೇ.23 ರಲ್ಲಿ ಹೆಣ್ಣು ಮಕ್ಕಳ ಸಂಖ್ಯೆ ನೋಡಿದರೆ ಅತ್ಯಂತ ಕಡಿಮೆ ಇದೆ. ಹಾಗಾಗಿ ಉನ್ನತ ಶಿಕ್ಷಣದ ಹಂತಕ್ಕೆ ಪೋಷಕರು ಹೆಣ್ಣು ಮಕ್ಕಳನ್ನು ಶಿಕ್ಷಣಕ್ಕಾಗಿ ಕಳುಸಿಕೊಡುತ್ತಿರುವುದಕ್ಕೆ ಮೊದಲು ಋಣಿಯಾಗಿರಬೇಕು. ಇದನ್ನು ಹೆಣ್ಣು ಮಕ್ಕಳು ಸದ್ಬಳಕೆ ಮಾಡಿಕೊಂಡು ಜೀವನದಲ್ಲಿ ಉನ್ನತ ಹುದ್ದೆಯನ್ನು ಪಡೆದು ಉತ್ತಮ ಪ್ರಜೆಗಳಾಗಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲ ಡಿ.ಕೆ. ಮಂಜಯ್ಯ ಮಾತನಾಡಿ, ಪತ್ರಿಕಾರಂಗದ ಕ್ಷೇತ್ರ ಇಂದು ಸಮುದ್ರದ ತರನಾಗಿ ಹರಡಿಕೊಂಡಿದೆ. ಮಾಧ್ಯಮಗಳಲ್ಲಿ ಕೆಲಸ ಮಾಡುವವರು ಎಂದರೆ ಬುದ್ಧವಂತರು, ಜ್ಞಾನಿಗಳು, ವಿಚಾರವಂತವರು ಎಂದು ಜನ ಸಾಮಾನ್ಯರು ಭಾವಿಸಿಕೊಂಡಿರುವುದು ಸತ್ಯದ ಸಂಗತಿ. ಹಾಗೆಯೇ ಮಾಧ್ಯಮಗಳಲ್ಲಿ ಕೆಲಸ ಮಾಡಲು ಆಸೆ ಹೊಂದಿರುವ ಯುವಕರು ಯಾವ ತರನಾಗಿ ಸಿದ್ಧರಾಗಬೇಕೆಂದರೆ ನಮಗೆ ಇಂತಹ ವಿಷಯ ತಿಳಿದಿಲ್ಲ ಎನ್ನಬಾರದು ಹಾಗೆ ಜ್ಞಾನಿಗಳಾಗಬೇಕು. ಕಾಲೇಜಿನಲ್ಲಿ ಎಲ್ಲಾ ವಿದ್ಯಾರ್ಥಿಗಳು ಒಂದು ತರನಾಗಿದ್ದರೆ, ಪತ್ರಿಕೋದ್ಯಮ ವಿಷಯ ಅಧ್ಯಯನ ಮಾಡುವ ವಿದ್ಯಾರ್ಥಿಗಳೇ ಒಂದು ತರನಾಗಿರುವುದು ನಮ್ಮ ಕಾಲೇಜಿನ ವಿಶೇಷ. ಏಕೆಂದರೆ ಪತ್ರಿಕೋದ್ಯಮ ಅಧ್ಯಯನ ಮಾಡುವ ವಿದ್ಯಾರ್ಥಿಗಳು ಸದಾ ಕ್ರೀಯಾಶೀಲರಾಗಿ ಇರುತ್ತಾರೆ, ಒಂದಿಲ್ಲೊಂದು ಚಟುವಟಿಕೆಯಲ್ಲಿ ತೊಡಗಿಕೊಂಡಿರುತ್ತಾರೆ. ಹಾಗಾಗಿ ಅವರು ಇತರ ವಿದ್ಯಾರ್ಥಿಗಳಿಗಿಂತ ಭಿನ್ನರಾಗಿ ಕಾಣುತ್ತಾರೆ, ಈಗಾಗಲೇ ಉತ್ತಮ ಚಟುವಟಿಕೆಗಳು ನಡೆಯುತ್ತಿದ್ದು, ಮುಂದಿನ ದಿನಗಳಲ್ಲಿ ಮತ್ತಷ್ಟು ಕಾರ್ಯಕ್ರಮಗಳು ಪತ್ರಿಕೋದ್ಯಮ ವಿಭಾಗದಿಂದ ಆಗಲಿ ಎಂದರು.

ಕಾರ್ಯಕ್ರಮದಲ್ಲಿ ಪತ್ರಿಕೋದ್ಯಮ ವಿದ್ಯಾರ್ಥಿಗಳಿಗಾಗಿ ಹಮ್ಮಿಕೊಂಡಿದ್ದ ಮಾಧ್ಯಮ ಸಂಬಂಧಿತ ವಿವಿಧ ಸ್ಪರ್ಧೆಯಲ್ಲಿ ಭಾಗವಹಿಸಿ ವಿಜೇತರಾದವರಿಗೆ ಬಹುಮಾನ ವಿತರಣೆ ಮಾಡಲಾತು. ಮುಖಪುಟ ವಿನ್ಯಾಸ ಸ್ಪರ್ಧೆ: ಮೌನಶ್ರೀ, ಸಿಂಚನ, ದೀಪಿಕ ತಂಡಕ್ಕೆ (ಪ್ರಥಮ), ರಚಿತ, ಕವಿತಾ, ರೂಪ ತಂಡಕ್ಕೆ (ದ್ವಿತೀಯ). ಆರ್. ಜೆ. ಸ್ಪರ್ಧೆ: ಬಿಂದು, ಮಾನ್ಯ ತಂಡಕ್ಕೆ (ಪ್ರಥಮ), ದೀಕ್ಷಿತ, ಶಾಲಿನಿ ತಂಡಕ್ಕೆ (ದ್ವಿತೀಯ) ಹಾಗೂ ಜಾಹಿರಾತು ನಿರ್ಮಾಣ ಸ್ಪರ್ಧೆಯಲ್ಲಿ: ನಯನ, ಸಿಂಚನ ಡಿ. , ದೀಪಿಕ, ಸ್ಫೂರ್ತಿ, ಡಿ.ಎಸ್. ನಯನ ತಂಡಕ್ಕೆ (ಪ್ರಥಮ), ಜ್ಯೋತಿ, ಸುನೀತ, ಕೃಪ, ಶಾಹಿಸ್ತ, ಚಿನ್ಮ ತಂಡ (ದ್ವಿತೀಯ) ಬಹುಮಾನ ಪಡೆದುಕೊಂಡರು.

ಐಕ್ಯೂಎಸಿ ಸಂಚಾಲಕ ಹಾಗೂ ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥ ಜಿ.ಆರ್. ಮೋಹನ್ ಕುಮಾರ್, ಪತ್ರಿಕೋದ್ಯಮ ಉಪನ್ಯಾಸಕರಾದ ಎಚ್.ಕೆ.ದಿಲೀಪ್ ಕುಮಾರ್, ಸಿ.ಪಿ. ಕಾವ್ಯ, ಮಹಿಳಾ ಕಾಲೇಜಿನ ಅಧ್ಯಾಪಕ ಎಸ್. ಯೋಗೇಶ್, ಪಿ. ರವಿಕುಮಾರ್ ಹಾಜರಿದ್ದರು.

# ಕೆರೆಯಲ್ಲಿ ಮುಳುಗಿ ಸಹೋದರರ ದಾರುಣ ಸಾವು

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಹಸು ಮೇಯಿಸಲೆಂದು ಜಮೀನಿಗೆ ತೆರಳಿದ್ದ ಸಹೋದರರಿಬ್ಬರು ಕೆರೆಯಲ್ಲಿ ಮುಳುಗಿ ಮೃತಪಟ್ಟಿರುವ ದಾರುಣ ಘಟನೆ ತಾಲ್ಲೂಕಿನ ದುದ್ದ ಹೋಬಳಿ ವಳಗೇರಹಳ್ಳಿ ಗ್ರಾಮದಲ್ಲಿ ನಡೆದಿದೆ. ಗ್ರಾಮದ ರಾಮಚಂದ್ರ ಹಾಗೂ ರತ್ನ ದಂಪತಿ ಪುತ್ರರಾದ ದರ್ಶನ್ (17) ಮತ್ತು ಲಕ್ಷ್ಮಿಕಾಂತ್ (5) ಮೃತರು. ಎಸ್ಎಸ್ಎಲ್ಸಿ ವ್ಯಾಸಂಗ ಮುಗಿಸಿದ್ದ ದರ್ಶನ್ ಗ್ರಾಮದ ಆಂಜನೇಯಸ್ವಾಮಿ ದೇವಾಲಯದಲ್ಲಿ ತಂದೆಯೊಂದಿಗೆ ಅರ್ಚಕನಾಗಿ ಕೆಲಸ ಮಾಡಿಕೊಂಡಿದ್ದ. ಲಕ್ಷ್ಮಿಕಾಂತ್ ಅಂಗನವಾಡಿಗೆ ಹೋಗುತ್ತಿದ್ದ. ಬುಧವಾರ



ಇಬ್ಬರೂ ತಮ್ಮ ಮೂರು ಹಸುಗಳನ್ನು ಕಟ್ಟಿಹಾಕಲು ಜಮೀನಿಗೆ ತೆರಳಿದ್ದರು. ಸಂಜೆ ವರೆಗೂ ಮನೆಗೆ ಬಾರದ ಹಿನ್ನಲೆಯಲ್ಲಿ ಕುಟುಂಬಸ್ಥರು ಎಲ್ಲಾ ಕಡೆ ಹುಡುಕಿ ರಾತ್ರಿ ದುದ್ದ ಠಾಣೆಯಲ್ಲಿ ನಾಪತ್ತೆ ಪ್ರಕರಣ ದಾಖಲಿಸಿದ್ದರು.

### ಕೆರೆಯಲ್ಲಿ ಹುಡುಕಾಟ

ಬುಧವಾರ ಸಂಜೆ ಮಕ್ಕಳು ಮನೆಗೆ ಬಾರದೆ ಇದ್ದಾಗ ಜಮೀನಿನಲ್ಲಿ ಹುಡುಕಾಡುತ್ತಿದ್ದಾಗ ಎರಡು ಹಸು ಕಟ್ಟಿ ಮತ್ತೊಂದನ್ನು ಹಾಗೆಯೇ ಬಿಟ್ಟಿರುವುದು ಗೊತ್ತಾಗಿದೆ. ಆದರೆ ಕಟ್ಟಿ ಹಾಕದೆ ಬಿಟ್ಟಿದ್ದ ಹಸು ಅಲ್ಲೇ ಇತ್ತಾದರೂ ಮಕ್ಕಳಿರಲಿಲ್ಲ. ಅವರು ಹಾಕಿದ್ದ ಚಪ್ಪಲಿ ಸೇರಿ ಯಾವ ಕುರುಹು ಇರಲಿಲ್ಲ.

ಕೆರೆ ಪಕ್ಕದಲ್ಲಿ ಶೋಧ ನಡೆಸಿದರೂ ಅವರು ಅಲ್ಲಿ ಓಡಾಡಿದ್ದರ ಬಗ್ಗೆ ಮಾಹಿತಿ ಇರಲಿಲ್ಲ. ಬೇರೆ ಎಲ್ಲಿಗಾದರೂ ಹೋಗಿರಬೇಕೆಂದು ಹುಡುಕಾಟ ನಡೆಸಲಾಗಿತ್ತು.

ಗುರುವಾರ ಬೆಳಿಗ್ಗೆ ಕೆರೆ ಪಕ್ಕದಲ್ಲೇ ಇರುವುದರಿಂದ ಪೊಲೀಸರು ಅಗ್ನಿಶಾಮಕ ದಳದ ನೆರವಿನಿಂದ ಶೋಧ ಕಾರ್ಯ ಆರಂಭಿಸಿತ್ತು. ಮಧ್ಯಾಹ್ನದ ವೇಳೆಗೆ ಇಬ್ಬರ ಮೃತದೇಹವು ಪತ್ತೆಯಾಗಿದೆ.

### ಆಟವಾಡಲು ಹೋಗಿದ್ದನೆಂಬ ಸಂಶಯ

ಜಮೀನು ಸಮೀಪದಲ್ಲೇ ಕೆರೆ ಇದ್ದು 5 ವರ್ಷದ ಬಾಲಕ ಲಕ್ಷ್ಮಿಕಾಂತ್ ನೀರಿನಲ್ಲಿ ಆಟವಾಡಲು ಇಳಿದಿರಬಹುದು.

ಅದನ್ನು ನೋಡಿದ ದರ್ಶನ್ ತಮ್ಮನನ್ನು ರಕ್ಷಿಸಲು ಹಸು ಕಟ್ಟುವುದನ್ನು ಬಿಟ್ಟು ದೌಡಾಯಿಸಿದ್ದಾನೆ. ಇಬ್ಬರಿಗೂ ನೀರಿನಿಂದ ಪಾರಾಗಿ ಬರಲು ಸಾಧ್ಯವಾಗದೆ ಮೃತಪಟ್ಟಿರಬಹುದೆಂದು ಪೊಲೀಸರು ಶಂಕೆ ವ್ಯಕ್ತಪಡಿಸಿದ್ದಾರೆ. ಕೆರೆ ಸಾಕಷ್ಟು ಆಳವಾಗಿದ್ದು ಇತ್ತೀಚೆಗೆ ಸುರಿದ ಭಾರೀ ಮಳೆಯಿಂದ ಭರ್ತಿಯಾಗಿದೆ. ಹೀಗಾಗಿ ಬದುಕುಳಿಯಲು ಸಾಧ್ಯವಾಗಿಲ್ಲ. ತಂದೆ ರಾಮಚಂದ್ರ, ತಾಯಿ ರತ್ನ ಹಾಗು ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿತ್ತು. ದುದ್ದ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಇಂದು 2500 ಅಡಿ ಉದ್ದದ ಕನ್ನಡ ಧ್ವಜ ಮೆರವಣಿಗೆ

ಹಾಸನ: ನಮ್ಮ ಹಾಸನ ಟಿವಿ, ಜಿಲ್ಲಾಡಳಿತದಿಂದ ನ. 1ರ ಶನಿವಾರ ಕನ್ನಡ ರಾಜ್ಯೋತ್ಸವದಂದು 2500 ಅಡಿ ಉದ್ದದ ಕನ್ನಡ ಧ್ವಜ ಮೆರವಣಿಗೆ ಹಮ್ಮಿಕೊಳ್ಳಲಾಗಿದೆ ಎಂದು ನಮ್ಮ ಹಾಸನ ಟಿವಿ ಸಂಪಾದಕ ತೌಫಿಕ್ ಹ್ಮದ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಅತೀ ಉದ್ದದ ಕನ್ನಡ ಧ್ವಜ ಮೆರವಣಿಗೆಗೆ ಈ ಬಾರಿ ಹಾಸನದ ಕಾರ್ಯಕ್ರಮ ಸಾಕ್ಷಿಯಾಗಲಿದೆ. ಆಂಧ್ರಪ್ರದೇಶದ ಲಕ್ಷ್ಮಿನಾರಾಯಣ ಗುಪ್ತ ಅವರು ಧ್ವಜ ರಚಿಸಿದ್ದಾರೆ. ಅಂದು ಬೆಳಿಗ್ಗೆ 8 ಗಂಟೆಗೆ ಜಿಲ್ಲಾಧಿಕಾರಿ ಕಚೇರಿಯಿಂದ ಜಿಲ್ಲಾ ಕ್ರೀಡಾಂಗಣ ವರೆಗೆ ಮೆರವಣಿಗೆ ನಡೆಯಲಿದ್ದು 3500 ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ ಎಂದು ಹೇಳಿದರು.

ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ, ಶಾಸಕ ಹೆಚ್.ಪಿ.ಸ್ವರೂಪ್, ಸಂಸದ ಶ್ರೇಯಸ್ ಪಟೇಲ್,




ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ, ಜಿಲ್ಲಾ ಪಂಚಾಯಿತಿ ಮುಖ್ಯಕಾರ್ಯನಿರ್ವಹಣಾಧಿಕಾರಿ ಬಿ.ಆರ್.ಪೂರ್ಣಿಮಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮೊಹಮ್ಮದ್ ಸುಜೀತಾ ಮತ್ತಿತರರು ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

ನಮ್ಮ ನಡೆ ಸೌಹಾರ್ದ, ಕನ್ನಡದ ಕಡೆಗೆ ಎಂಬ ಧ್ಯೇಯ ವಾಕ್ಯದೊಂದಿಗೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಕನ್ನಡಾಭಿಮಾನಿಗಳು ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದರು. ಸಂಗೀತ ನಿರ್ದೇಶಕ ಶಕೀಲ್ ಅಹ್ಮದ್, ಸೈಯದ್ ತಾಜ್, ಗುರುಪ್ರಸಾದ್ ಇದ್ದರು.

# ಕನ್ನಡ ರಾಜ್ಯೋತ್ಸವ-ನಾಡಿನ ಏಕತೆಯ ಹಬ್ಬ




ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ನವೆಂಬರ್ 1, ಕರ್ನಾಟಕದ ಪ್ರತಿಯೊಬ್ಬ ಕನ್ನಡಿಗನ ಹೃದಯದಲ್ಲಿ ಹೆಮ್ಮೆಯ ದಿನ. ಇದು ಕೇವಲ ಒಂದು ಆಚರಣೆ ದಿನವಲ್ಲ ಇದು ಭಾಷೆ, ಸಂಸ್ಕೃತಿ, ಪರಂಪರೆ, ಐಕ್ಯತೆ ಮತ್ತು ಸ್ವಾಭಿಮಾನದ ದಿನ. ಸ್ವಾತಂತ್ರ್ಯದ ನಂತರ ಭಾರತದಲ್ಲಿ ರಾಜ್ಯಗಳನ್ನು ಭಾಷಾವಾರು ಆಧಾರದ ಮೇಲೆ ಪುನರ್‌ರಚಿಸಲು ಜನರಿಂದ ಬಲವಾದ ಬೇಡಿಕೆ ಉದ್ಭವಿಸಿತು. ಅದರ ಫಲವಾಗಿ 1956ರ ನ. 1ರಂದು ರಾಜ್ಯ ಪುನರ್ ರಚನೆ ಕಾಯ್ದೆ ಜಾರಿಗೆ ಬಂದು, ಕನ್ನಡ ಭಾಷೆಯ ಜನರು ವಾಸಿಸುತ್ತಿದ್ದ ವಿವಿಧ ಪ್ರಾಂತಗಳು ಒಂದಾಗಿ ಮೈಸೂರು ರಾಜ್ಯ ರಚನೆಯಾಯಿತು.

ಹಿಂದೆ ಬಾಂಬೆ, ಹೈದರಾಬಾದ್, ಮದ್ರಾಸ್ ಮತ್ತು ಮೈಸೂರು ಪ್ರಾಂತ್ಯಗಳಲ್ಲಿದ್ದ ಕನ್ನಡ ಮಾತನಾಡುವ ಪ್ರದೇಶಗಳನ್ನು ಒಂದೇ ರಾಜ್ಯದ ಅಡಿಯಲ್ಲಿ ತರಲಾಯಿತು. ನಂತರ 1973ರ ನ. 1ರಂದು ಅಂದಿನ ಮುಖ್ಯಮಂತ್ರಿ ದೇವರಾಜ ಅಳವಂಕಿ ಅವರ ಕಾಲದಲ್ಲಿ ಮೈಸೂರು ರಾಜ್ಯಕ್ಕೆ ‘ಕರ್ನಾಟಕ’ ಎಂಬ ಹೆಸರನ್ನು ನೀಡಲಾಯಿತು. ಈ ದಿನದಿಂದಲೇ ನ. 1 ಅನ್ನು ಕರ್ನಾಟಕ ರಾಜ್ಯೋತ್ಸವವಾಗಿ ಆಚರಿಸಲಾಗುತ್ತಿದೆ.

### ರಾಜ್ಯೋತ್ಸವದ ಅರ್ಥ ಮತ್ತು ಸಂದೇಶ

ಕನ್ನಡ ರಾಜ್ಯೋತ್ಸವ ನಮ್ಮ ಭಾಷಾ ಐಕ್ಯತೆಯ ಸಂಕೇತ. ಕರ್ನಾಟಕದ ವಿವಿಧ ಭಾಗಗಳಲ್ಲಿ ಮಾತನಾಡುವ ಉಪಭಾಷೆಗಳು, ಧರ್ಮ, ಸಂಸ್ಕೃತಿಗಳ ವೈವಿಧ್ಯ ಇವುಗಳೆಲ್ಲವನ್ನು ಒಟ್ಟುಗೂಡಿಸುವ ಶಕ್ತಿಯು ಕನ್ನಡದಲ್ಲಿದೆ. ಈ ದಿನ ನಮ್ಮ ನಾಡಿನ ಪರಂಪರೆಯನ್ನು, ನಾಡಹಬ್ಬಗಳನ್ನು, ಕಲೆ, ಸಾಹಿತ್ಯ, ಸಂಗೀತ ಹಾಗೂ ವೀರರ ಪರಾಕ್ರಮವನ್ನು ಸ್ಮರಿಸಲಾಗುತ್ತದೆ.

### ರಾಜ್ಯೋತ್ಸವದ ಆಚರಣೆಗಳು

ಪ್ರತಿವರ್ಷ ನ. 1ರಂದು ರಾಜ್ಯದಾದ್ಯಂತ ಹಬ್ಬದ ವಾತಾವರಣ ನಿರ್ಮಾಣವಾಗುತ್ತದೆ, ರಾಜ್ಯಧ್ವಜ ಹಾರಿಸುವುದು, ನಮ್ಮ ನಾಡು-ನಮ್ಮ ಭಾಷೆ ಘೋಷಣೆಗಳು, ಸರ್ಕಾರಿ ಹಾಗೂ ಖಾಸಗಿ ಸಂಸ್ಥೆಗಳಲ್ಲಿ ವಿಶೇಷ ಕಾರ್ಯಕ್ರಮಗಳು. ಕನ್ನಡ ರತ್ನ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿಗಳು ಪ್ರದಾನ, ಶಾಲೆ, ಕಾಲೇಜುಗಳಲ್ಲಿ ಕನ್ನಡ ಗೀತೆಗಳು ಮತ್ತು ಸಂಸ್ಕೃತಿಕ ಪ್ರದರ್ಶನಗಳು.

### ಕರ್ನಾಟಕದ ವೈಭವ

ಕರ್ನಾಟಕವು ನೈಸರ್ಗಿಕ ಸಂಪತ್ತಿನಿಂದ, ಕಲೆ-ಸಾಹಿತ್ಯದಿಂದ, ವಿಜ್ಞಾನ ಮತ್ತು ತಂತ್ರಜ್ಞಾನದಿಂದ ವಿಶ್ವದ ಗಮನ ಸೆಳೆದಿದೆ. ವಿಜಯನಗರ ಸಾಮ್ರಾಜ್ಯದ ಕೀರ್ತಿ, ಶಿವಾಜಿ, ಕಿತ್ತೂರು ರಾಣಿ ಚನ್ನಮ್ಮ, ಸಂಗೊಳ್ಳಿ ರಾಯಣ್ಣ, ಸಂತ ಪುರಂದರ ದಾಸರ ಕೀರ್ತನೆಗಳು, ಕುಮಾರವ್ಯಾಸರಿಂದ ಕುವೆಂಪುವರೆಗೆ ಸಾಹಿತ್ಯ ಕೀರ್ತಿಯ ಬೆಳಕು ಇವೆಲ್ಲವೂ ನಮ್ಮ ನಾಡಿನ ಹೆಮ್ಮೆಯ ಧಾರೆಗಳು.

ಕನ್ನಡ ರಾಜ್ಯೋತ್ಸವವು ನಮ್ಮೆಲ್ಲರಿಗೂ ಕನ್ನಡದ ಮೌಲ್ಯ, ಸ್ವಾಭಿಮಾನ ಮತ್ತು ನಾಡಿನ ಮೇಲಿನ ಪ್ರೀತಿಯ ಸ್ಮರಣೆ. ಎಲ್ಲ ಕನ್ನಡಿಗರು ಒಂದಾಗಿ, ಕನ್ನಡದ ಹೆಮ್ಮೆ ಉಳಿಸೋಣ ಎಂಬ ಒಗ್ಗಟ್ಟಿನ ಸಂದೇಶ ನೀಡುತ್ತದೆ.

# ಅಪಾಯಕ್ಕೆ ಆಹ್ವಾನ ನೀಡುತ್ತಿರುವ ಮರಗಳ ತೆರವುಗೊಳಿಸಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಆಲೂರು: ತಾಲ್ಲೂಕಿನಾದ್ಯಂತ ಸುರಿಯುತ್ತಿರುವ ಮಳೆ ಹಾಗು ಗಾಳಿಗೆ ರಸ್ತೆ ಬದಿಯ ಮರ, ಕೊಂಬೆಗಳು ಧರೆಗುರುಳುತ್ತಿದ್ದು ಸಾರ್ವಜನಿಕರನ್ನು ಆತಂಕಕ್ಕೀಡು ಮಾಡಿದೆ.

ತಾಲ್ಲೂಕಿನಲ್ಲಿ ಪ್ರತಿ ಬಾರಿ ರಭಸವಾದ ಮಳೆ, ಗಾಳಿಗೆ ಮರ, ವಿದ್ಯುತ್ ಕಂಬಗಳು ನೆಲಕ್ಕುರುಳಿ ಅನಾಹುತ ಸಂಭವಿಸುತ್ತಿದೆ. ವಾಹನಗಳ ಮೇಲೆ ಬಿದ್ದು ಅಪಾರ ನಷ್ಟ ಉಂಟು ಮಾಡುತ್ತಿವೆ. ವಾಹನಗಳು ಜಖಂಗೊಂಡಿರುವುದು ಮಾತ್ರವಲ್ಲದೆ ಅನೇಕರು ಗಾಯಗೊಂಡಿದ್ದಾರೆ. ಅಪಾಯಕ್ಕೆ ಆಹ್ವಾನ ನೀಡುವ ಮರಗಳ ತೆರವುಗೊಳಿಸಬೇಕೆಂದು ಸ್ಥಳೀಯರು ಆಗ್ರಹಿಸಿದ್ದಾರೆ.

ತಾಲ್ಲೂಕಿನ ದೇವರಾಜಪುರ ಗ್ರಾಮದ ರಾಜ್ಯ ರಸ್ತೆಯ ಸಮೀಪದ



ಲಕ್ಕಮ್ಮ ಅವರ ಮನೆಯ ಮೇಲೆ ಎರಡು ಮರ ಬಿದ್ದು ಮನೆಯು ಜಖಂಗೊಂಡು ಇಬ್ಬರು ಕೂದಲೆಳೆ ಅಂತರದಲ್ಲಿ ಪಾರಾಗಿದ್ದಾರೆ. ಮುಂಗಾರಿನ ಪ್ರಾರಂಭದಲ್ಲಿ ಲಕ್ಷ್ಮೀಪುರ ಭಾಗದಲ್ಲಿ ಬೃಹತ್ ಮರ ಬಿದ್ದು ಸಂಚಾರ ಅಸ್ತವ್ಯಸ್ತವಾಗಿತ್ತು. ಅಲ್ಲದೆ ಕಾರ್ಜುವಳ್ಳಿ ರಸ್ತೆಯ ಪಕ್ಕದಲ್ಲಿದ್ದ ಮರಗಳು ನೆಲಕ್ಕುರುಳಿದ್ದವು. ರಸ್ತೆ ಅಂಚಿನ ಅಕೇಶಿಯಾ ಮರಗಳು ಬುಡಮೇಲಾಗುತ್ತಿವೆ. ಹಲವೆಡೆ ವಿದ್ಯುತ್ ತಂತಿ, ಕಂಬ ಧರೆಗುರುಳಿ ಅನಾಹುತ ಸೃಷ್ಟಿಸುತ್ತಿವೆ. ಕೂಡಲೇ ಎಚ್ಚೆತ್ತು ರಸ್ತೆಬದಿ ಒಣಗಿರುವ, ರಸ್ತೆಗೆ ಚಾಚಿಕೊಂಡಿರುವ, ವಿದ್ಯುತ್ ತಂತಿಗೆ ಚಾಚಿಕೊಂಡಿರುವ ಮರ ಹಾಗು ಕೊಂಬೆಗಳ ತೆರವಿಗೆ ಅರಣ್ಯ ಇಲಾಖೆ ಮುಂದಾಗಬೇಕೆಂಬ ಒತ್ತಾಯ ಕೇಳಿಬಂದಿದೆ.

ಆಲೂರು-ಬಿಕ್ಕೋಡು ಮಾರ್ಗದ ರಸ್ತೆಯಲ್ಲಿ ಮರದ ಕೊಂಬೆಗಳು ರಸ್ತೆಗೆ ಚಾಚಿಕೊಂಡಿವೆ. ವಿದ್ಯುತ್ ತಂತಿಗೂ ತಗುಲಿವೆ. ಅನಾಹುತ ಸಂಭವಿಸುವ ಮುನ್ನ ಕ್ರಮ ಕೈಗೊಳ್ಳಬೇಕೆಂದು ದೇವರಾಜಪುರ ಗ್ರಾಮದ ದೇವರಾಜು ಆಗ್ರಹಿಸಿದರು.

# ಕೂಗು ಒಮ್ಮೆ ಬಾನು ಮೊಳಗಲಿ...



ಕೂಗಿ ಹೇಳು ಬಾನೆಲ್ಲ ಮೊಳಗಲಿ
ಹಾಡಿ ಹೊಗಳು ನಾಡೆಲ್ಲ
ಗುಣಗಲಿ
ಕನ್ನಡ ಕನ್ನಡ ಕನ್ನಡ....

ಎಲ್ಲೇ ಇರಲಿ ಹೇಗೆ ಇರಲಿ
ಹುಟ್ಟಿದೂರ ಮರೆಯದಿರೋಣ
ತಿಂದ ಅನ್ನ ಕುಡಿದ ನೀರು
ಹೆಗಲ ಮೇಲಿದೆ ನೆಲದ ಋಣ

ಕನ್ನಡದ ಕಂಪು ಕನವರಿಸು ಇಂಪು
ಹಾಡಿದ ನಾಲಿಗೆಯೇ ಪುಣ್ಯ
ಕೇಳಿದ ಕಿವಿಗಳೇ ಧನ್ಯ
ಒಮ್ಮೆ ಕಣ್ಣು ಮುಚ್ಚಿ ಕೂಗು
ಇಲ್ಲವಾದಲ್ಲಿ ನಿನ್ನ ಬದುಕು
ನಗಣ್ಯ

ಜಗದಗಲ ನುಡಿಯಲು
ಅಂಜದಿರು
ಮನದಗಲ ಸವಿಯಲು
ಮರೆಯದಿರು
ಭಾಷೆಯಷ್ಟೇ ಅಲ್ಲ ನಾಡ ಸಂಸ್ಕೃತಿ
ಶಬ್ದವಷ್ಟೇ ಅಲ್ಲ ಸಾಹಿತ್ಯ ಶೃತಿ

ನಮ್ಮ ಜನ ನಮ್ಮ ಮನ
ನಮಗೆ ಅಚ್ಚುಮೆಚ್ಚು
ನಮ್ಮ ಊರು ನಮ್ಮ ಭಾಷೆ
ಸವಿದಷ್ಟು ಬೆಲ್ಲದಚ್ಚು

ಕೂಗಿ ಹೇಳು ಬಾನೆಲ್ಲ ಮೊಳಗಲಿ
ಹಾಡಿ ಹೊಗಳು ನಾಡೆಲ್ಲ
ಗುಣಗಲಿ
ಕನ್ನಡ ಕನ್ನಡ ಕನ್ನಡ....

- ಆರ್.ಶ್ರೀನಿವಾಸ್ ಉಳ್ಳಾವಳ್ಳಿ
ಮೊ.ಸಂ.9741290979

# ವೇಣು ಪ್ರಸಾದ್‌ಗೆ ಪಿಎಚ್‌ಡಿ ಪದವಿ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಹೊಳೆನರಸೀಪುರ ತಾಲ್ಲೂಕು ಪಡುವಲಹಿಪ್ಪೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಗಣಿತ ಶಾಸ್ತ್ರ ವಿಭಾಗದ ಸಹ ಪ್ರಾಧ್ಯಾಪಕ ಕೆ.ಕೆ.ವೇಣು ಪ್ರಸಾದ್‌ಗೆ ಮೈಸೂರು ವಿಶ್ವವಿದ್ಯಾಲಯ ಪಿಎಚ್‌ಡಿ ಪದವಿ ಘೋಷಿಸಿದೆ.

ಡಾ. ಕೆ.ಶಿವಶಂಕರ್ ಅವರ ಮಾರ್ಗದರ್ಶನದಲ್ಲಿ ಮಂಡಿಸಿದ ‘Mathematical Study of Convective Heat Transfer through a porous medium’ ಸಂಶೋಧನಾ ಪ್ರಬಂಧಕ್ಕೆ ಪಿಎಚ್‌ಡಿ ದೊರೆತಿದೆ.



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಲಂಡನ್‌ನ ರಾಯಲ್ ಕಾಲೇಜ್ ಆಫ್ ರೆಡಿಯಾಲಾಜಿಸ್ಟ್ ಸಂಸ್ಥೆಯಲ್ಲಿ ಇತ್ತೀಚೆಗೆ ಜರುಗಿದ ಘಟಿಕೋತ್ಸವದಲ್ಲಿ ಚನ್ನರಾಯಪಟ್ಟಣದ ವೈದ್ಯೆ ಡಾ. ನಿಖಿತಾ ನಾಗೇಶ್ ಅವರಿಗೆ ಫೆಲೋ ಆಫ್ ರಾಯಲ್ ಕಾಲೇಜ್ ಆಫ್ ರೆಡಿಯಾಲಾಜಿಸ್ಟ್ (ಎಫ್ ಆರ್‌ಸಿಆರ್) ಪದವಿ ಪ್ರದಾನ ಮಾಡಲಾಯಿತು. ಸಂಸ್ಥೆ ಅಧ್ಯಕ್ಷ ಡಾ. ಸ್ಟೀಫನ್ ಹಾರ್ಡನ್ ಪ್ರಶಸ್ತಿ ಪ್ರದಾನ ಮಾಡಿದರು. ಡಾ. ನಿಖಿತಾ ಅವರು ಪಟ್ಟಣದ ಖ್ಯಾತ ವೈದ್ಯ ಡಾ. ಕೆ. ನಾಗೇಶ್ ಮತ್ತು ಡಾ. ಭಾರತಿ ನಾಗೇಶ್ ಅವರ ಪುತ್ರಿ. ಡಾ. ನಾಗೇಶ್ ಆಸ್ಪತ್ರೆ ಹಾಗೂ ಸಮೂಹ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿ ನಿಖಿತಾ ಅವರಿಗೆ ಅಭಿನಂದಿಸಿದೆ.

# ಆಡಳಿತ ಮಂಡಳಿ ನಿಷ್ಠೆಯಿಂದ ಸಂಘಗಳ ಅಭಿವೃದ್ಧಿ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಆಲೂರು: ಸಂಘ-ಸಂಸ್ಥೆಗಳ ಶ್ರೇಯೊಭಿವೃದ್ಧಿ ಆಡಳಿತ ಮಂಡಳಿ ಕಾರ್ಯವೈಖರಿ ಮತ್ತು ನಿಷ್ಠೆಯನ್ನು ಒಳಗೊಂಡಿರುತ್ತದೆ ಎಂದು ಮಾಜಿ ಶಾಸಕ ಹೆಚ್.ಕೆ. ಕುಮಾರಸ್ವಾಮಿ ತಿಳಿಸಿದರು. ತಾಲ್ಲೂಕಿನ ಭಕ್ತರವಳ್ಳಿ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಕಟ್ಟಡ ಉದ್ಘಾಟಿಸಿ ಮಾತನಾಡಿ, ಗ್ರಾಮೀಣ ಭಾಗದ ರೈತರಿಗೆ ಹೈನುಗಾರಿಕೆ ಪ್ರಮುಖ ಆರ್ಥಿಕವಾಗಿ ಲಾಭದಾಯಕವಾಗಿದೆ. ಹಸುಗಳನ್ನು ಸಾಕುವುದರಿಂದ ಹಾಲಿನ ಜೊತೆಗೆ ಕೊಟ್ಟಿಗೆ ಗೊಬ್ಬರ ಬಳಸಿಕೊಂಡು ಜಮೀನು ಫಲವತ್ತತೆ ಉಳಿಸಿಕೊಳ್ಳಬಹುದು. ಹೀಗಾಗಿ ರೈತರು ಕೃಷಿ ಜೊತೆಗೆ ಉಪಕಸುಬಾಗಿ ಹೈನುಗಾರಿಕೆ ಅವಲಂಬಿಸಿರುವುದು ಒಳಿತು ಎಂದರು. ನಾನು ಮೂರು ಬಾರಿ ಶಾಸಕನಾಗಿ ವಿರೋಧ ಪಕ್ಷದ ಸಾಲಿನಲ್ಲಿ ಕುಳಿತಿದ್ದರೂ ಸಹ, ಈ ಭಾಗದಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸ ಮಾಡಿದ್ದೇನೆ. ಹಾಲು ಡೈರಿಗಳಲ್ಲಿ ರಾಜಕೀಯಕ್ಕೆ ಅವಕಾಶ ಕಲ್ಪಿಸದೆ ದೇವಾಲಯ ಎಂದು ಭಾವಿಸಿದರೆ ಯಾವುದೇ ಅವ್ಯವಹಾರ ನಡೆಯುವುದಿಲ್ಲ. ಸರ್ಕಾರ ಮಾಡದ ಕೆಲಸವನ್ನು ಶ್ರೀ ಕ್ಷೇತ್ರ ಧರ್ಮಸ್ಥಳ ಸಂಘವು ದೇವಸ್ಥಾನ ನಿರ್ಮಾಣ, ಬಡವರಿಗೆ ಮನೆ ನಿರ್ಮಾಣ, ಕೆರೆ ಅಭಿವೃದ್ಧಿ ಹೀಗೆ ಹತ್ತು ಹಲವು ಕಾರ್ಯಕ್ರಮ ಹಮ್ಮಿಕೊಂಡು ಜನರ ಒಳಿತಿಗಾಗಿ ದುಡಿಯುತ್ತಿದೆ ಎಂದರು.

ಹೆಚ್‌ಡಿಸಿಸಿ ಬ್ಯಾಂಕ್ ನಿರ್ದೇಶಕ ಕೆ.ಎಸ್. ಮಂಜೇಗೌಡ ಮಾತನಾಡಿ, ಹಾಲು ಉತ್ಪಾದಕರು ಡೈರಿಗಳಿಗೆ ಹಾಕುವ ಹಾಲಿನ ಗುಣಮಟ್ಟ ಉತ್ತಮವಾಗಿದ್ದರೆ ಉತ್ಪಾದಕರಿಗೆ ಉತ್ತಮ ಬೆಲೆ ಸಿಗುವುದರ ಮೂಲಕ ಸಹಕಾರ ಸಂಘ ಉತ್ತಮವಾಗಿ ಅಭಿವೃದ್ಧಿಯಾಗುತ್ತದೆ. ಹಾಲು ಉತ್ಪಾದಕರಿಗೂ ಆರ್ಥಿಕವಾಗಿ ಸಹಾಯವಾಗುತ್ತದೆ. ಕ್ಷೇತ್ರದ ಅಭಿವೃದ್ಧಿಗೆ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ, ಹೆಚ್.ಡಿ. ರೇವಣ್ಣ ಹಾಗೂ ಮಾಜಿ ಶಾಸಕ ಹೆಚ್.ಕೆ. ಕುಮಾರಸ್ವಾಮಿ ಸಾಕಷ್ಟು ಸಹಕಾರ ನೀಡಿದ್ದಾರೆ ಎಂದರು. ಕಾರ್ಯಕ್ರಮದಲ್ಲಿ ಕೆಎಂಎಫ್ ನಿರ್ದೇಶಕ ಪಿ.ಎಲ್. ನಿಂಗರಾಜು, ಹಂಚೂರು ಟಿಎಪಿಸಿಎಂಎಸ್ ಅಧ್ಯಕ್ಷ ಮಂಜೇಗೌಡ ಉಪಸ್ಥಿತರಿದ್ದರು.

# ಇಂದಿನಿಂದ ನಾಲ್ಕು ದಿನ ಅಖಿಲ ಭಾರತ ಅಥ್ಲೆಟಿಕ್

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ:ವಿದ್ಯಾಭಾರತಿ ಅಖಿಲ ಭಾರತ ಮಟ್ಟದ ಅಥ್ಲೆಟಿಕ್ ಕ್ರೀಡಾಕೂಟ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ನ. 1 ರಿಂದ 4ರ ವರೆಗೆ ನಾಲ್ಕು ದಿನಗಳ ಕಾಲ ನಡೆಯಲಿದೆ ಎಂದು ಮಂಗಳೂರು ಎಜುಕೇಶನ್ ಅಂಡ್ ಚಾರಿಟೆಬಲ್ ಟ್ರಸ್ಟ್ ಅಧ್ಯಕ್ಷ ಚಂದ್ರರಾಜ್ ಜೈನ್ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ನ. 1ರ ಸಂಜೆ 4 ಗಂಟೆಗೆ ಕ್ರೀಡಾಕೂಟ ಉದ್ಘಾಟನಾ ಸಮಾರಂಭ ನೆರವೇರಲಿದೆ. ವಿದ್ಯಾಭಾರತಿ ಶಿಕ್ಷಣ ಸಂಸ್ಥೆಯು ದೇಶಾದ್ಯಂತ 24 ಸಾವಿರ ಸಂಸ್ಥೆಗಳನ್ನು ಹೊಂದಿದೆ. ಪ್ರತಿವರ್ಷ ಸಬ್ ಜೂನಿಯರ್, ಜೂನಿಯರ್ ಹಾಗೂ ಸಿನಿಯರ್ ವಿಭಾಗದಲ್ಲಿ ಮಕ್ಕಳಿಗಾಗಿ ಕಳೆದ 35 ವರ್ಷಗಳಿಂದ ಕ್ರೀಡಾಕೂಟ ಹಮ್ಮಿಕೊಳ್ಳುತ್ತಿದೆ. ಈ ವರ್ಷ




ಮಂಗಳೂರು ಪಬ್ಲಿಕ್ ಶಿಕ್ಷಣ ಸಂಸ್ಥೆಗಳ ಸಹಕಾರದಲ್ಲಿ ಕ್ರೀಡಾಕೂಟವನ್ನು ಆಯೋಜಿಸಿದೆ ಎಂದರು.

ಎಲ್ಲಾ ರಾಜ್ಯಗಳಿಂದ ಕ್ಷೇತ್ರ ಮಟ್ಟದಲ್ಲಿ ಪ್ರಥಮ ಹಾಗು ದ್ವಿತೀಯ ಸ್ಥಾನ ಪಡೆದ 1800 ಕ್ರೀಡಾಪಟುಗಳು ಭಾಗವಹಿಸಲಿದ್ದಾರೆ. 22 ಬಗೆಯ ಸ್ಪರ್ಧೆಗಳು ನಡೆಯಲಿವೆ. ಸುಮಾರು 150ಕ್ಕೂ ಹೆಚ್ಚು ಗಣ್ಯರು ಭಾಗವಹಿಸಲಿದ್ದಾರೆ. ಎಲ್ಲಾ ಕ್ರೀಡಾಪಟುಗಳಿಗೆ ಊಟ ಮತ್ತು ವಸತಿ ವ್ಯವಸ್ಥೆ ಮಾಡಲಾಗಿದೆ ಎಂದು ತಿಳಿಸಿದರು.

# ಇತಿಹಾಸದಲ್ಲಿ ಈ ದಿನ

## ನವೆಂಬರ್-01

1956: ರಾಜ್ಯ ಪುನರ್ ರಚನೆ ಕಾಯ್ದೆ ಜಾರಿಯಾಯಿತು. ಭಾಷಾವಾರು ಆಧಾರದ ಮೇಲೆ ಭಾರತದ ರಾಜ್ಯಗಳನ್ನು ಪುನರ್ ವ್ಯವಸ್ಥೆಗೊಳಿಸಲಾಯಿತು.

1973: ಮೈಸೂರು ರಾಜ್ಯಕ್ಕೆ ಅಧಿಕೃತವಾಗಿ ಕರ್ನಾಟಕ ಎಂಬ ಹೆಸರನ್ನು ನೀಡಲಾಯಿತು. ಅದರಿಂದ ನ. 1 ಅನ್ನು ಕರ್ನಾಟಕ ರಾಜ್ಯೋತ್ಸವ ದಿನವೆಂದು ಆಚರಿಸಲಾಗುತ್ತದೆ.

1954: ಫ್ರೆಂಚ್ ಆಳ್ವಿಕೆಯಲ್ಲಿ ಇದ್ದ ಪುದುಚೇರಿ, ಕರೈಕಲ್, ಯಾನಂ ಮತ್ತು ಮಾವೇಲಿಪುರಂ ಭಾರತದ ಭಾಗಗಳಾದವು.

### ಜನನ

1880: ಪಿ.ಎನ್. ಪನಿಕ್ಕರ್, ಕೇರಳದ ಗ್ರಂಥಾಲಯ ಚಳವಳಿ ಪಿತಾಮಹ

1903: ಹೋಮೈ ವ್ಯಾರಾವಲ್ಲಾ, ಭಾರತದ ಮೊದಲ ಮಹಿಳಾ ಛಾಯಾಗ್ರಾಹಕಿ

1930: ಎ.ಬಿ. ವಾಜಪೇಯಿ ಅವರ ಆಪ್ತ ಸಹಚರ ಹಾಗೂ ಹಿರಿಯ ರಾಜಕಾರಣಿ ಲಾಲ್‌ಜಿ ಟಾಂಡನ್

1951: ಅಂಜಲಿ ಭಾಗವತ್, ಭಾರತೀಯ ಶೂಟರ್, ಕಾಮನ್ ವೆಲ್ತ್ ಕ್ರೀಡಾಕೂಟದ ಚಿನ್ನದ ಪದಕ ವಿಜೇತೆ

1956: ಕೆ.ಆರ್. ರಮೇಶ್ ಕುಮಾರ್, ಕರ್ನಾಟಕದ ಹಿರಿಯ ರಾಜಕಾರಣಿ, ಮಾಜಿ ವಿಧಾನಸಭಾ ಸ್ಪೀಕರ್

### ಮರಣ

1956: ಶ್ರೀ ವಿಜಯೇಂದ್ರ ತೀರ್ಥ ಸ್ವಾಮೀಜಿ, ಮಧ್ವಸಂಪ್ರದಾಯದ ಪ್ರಮುಖ ಪೀಠಾಧಿಪತಿ

1982: ಶ್ರೀಧರ ಮೂರ್ತಿ, ಕನ್ನಡದ ಪ್ರಸಿದ್ಧ ಲೇಖಕ ಮತ್ತು ಕವಿ

2011: ಇ. ಸುಬ್ರಹ್ಮಣ್ಯನ್,ತಮಿಳುನಾಡಿನ ಹಿರಿಯ ಚಿತ್ರಕಲಾವಿದ

# ಕನ್ನಡಕೆ ಕೈ ಎತ್ತು ಗೌರಿ ಶಿಖರದ ಹಾಗೆ

**- ಹೆಚ್.ಎಸ್. ಪ್ರತಿಮಾ ಹಾಸನ್**

ಕನ್ನಡಕೆ ಕೈಯೆತ್ತು ಗೌರಿ ಶಿಖರದ ಹಾಗೆ
ಕನ್ನಡಕೆ ಕೊರಳೆತ್ತು ಪಾಂಚಜನ್ಯ
ಕನ್ನಡವ ನೆನೆಯುತ್ತ ಕನ್ನಡಾಂಬೆಗೆ ನಮಿಸು
ಕನ್ನಡವೆ ಚೆನ್ನುಡಿಯು ಲಕ್ಷ್ಮಿದೇವಿ.......

ಈ ಮೇಲಿನ ಮುಕ್ತಕದಂತೆ ನಮ್ಮ ಕನ್ನಡವನ್ನು ನಾವೇ ಉಳಿಸುವ ಕಾರ್ಯ ಮಾಡಬೇಕಿದೆ. ಕನ್ನಡಕ್ಕೆ ಕೈ ಎತ್ತು ಗೌರಿ ಶಿಖರದ ಹಾಗೆ ಕನ್ನಡಕ್ಕೆ ಕೊರಳೆತ್ತು ಪಾಂಚಜನ್ಯ ನಮ್ಮ ಕನ್ನಡವನ್ನು ನೆನೆಯುತ್ತಾ ಕನ್ನಡದ ಬಗ್ಗೆ ಕೈ ಮುಗಿದು ನಮಿಸಬೇಕಿದೆ. ಕನ್ನಡವೇ ಚೆನ್ನುಡಿಯು ಎಂದು ದೇವರಿಗೆ ಕೈಮುಗಿಯುವುದು ಮುಖ್ಯ. ಪ್ರತಿಯೊಬ್ಬರೂ ಕನ್ನಡವನ್ನು ಉಳಿಸುತ, ಬೆಳೆಸುತ ಕಾರ್ಯವನ್ನು ಮಾಡಬೇಕಿದೆ. ಜನಸಾಮಾನ್ಯರ ಜೀವನದಲ್ಲಿ ಕೆಲಸ ಎಂಬುದು ಬಹಳ ಮುಖ್ಯ. ಇಂತಹ ಕೆಲಸವನ್ನು ಪಡೆಯಬೇಕಾದರೆ ಅನ್ಯ ಭಾಷೆಗಳಲ್ಲಿ ಇಂಗ್ಲಿಷ್ ಭಾಷೆ ಕಡ್ಡಾಯವಾಗಿ ಕಲಿತಿರಬೇಕು. ಇಲ್ಲದಿದ್ದರೆ ಕೆಲಸವೇ ಸಿಗದಿರುವ ಪರಿಸ್ಥಿತಿ ಇದೆ. ನಮ್ಮ ಮಾತೃಭಾಷೆ ಕನ್ನಡವನ್ನು ಪ್ರಾಮುಖ್ಯತೆ ನೀಡದಿರುವುದು ಈ ವಿಷಯದಲ್ಲಿ ನಾವು ನೋಡಬಹುದು. ದಯಮಾಡಿ ಕನ್ನಡಕ್ಕೆ ಪ್ರಾಮುಖ್ಯತೆಯನ್ನು ನೀಡಿ. ನಮ್ಮ ಸರ್ಕಾರ ಕನ್ನಡ ಮಾಧ್ಯಮದಲ್ಲಿ ಓದಿದಂತಹ ಮಕ್ಕಳಿಗೆ ಹಲವಾರು ವ್ಯವಸ್ಥೆಯನ್ನು ಮಾಡುತ್ತಿದೆ. ಅಂತಹದ್ದನ್ನು ಸದುಪಯೋಗಪಡಿಸಿಕೊಳ್ಳಬೇಕಾಗಿದೆ. ದಿನನಿತ್ಯ ನಮ್ಮ ಸರ್ಕಾರದ ಕೆಲಸಗಳನ್ನು ಗಮನಿಸಿದರೆ ಸರ್ಕಾರವಂತು ಸವಲತ್ತುಗಳನ್ನು ನೀಡುತ್ತಿದೆ. ಅದನ್ನು ಉಪಯೋಗ ಮಾಡಿಕೊಳ್ಳುವವರು ಕಡಿಮೆ ಇದ್ದಾರೆ. ಜನರ ಜೀವನದಲ್ಲಿ ಭಾಷೆಯು ಒಂದು ಪ್ರಕಾರವೇ. ಅಂತಹ ಭಾಷೆಯನ್ನು ಪ್ರಮುಖವಾಗಿ ಕಾಣಬೇಕಿದೆ. ತಾಯಿ ನುಡಿಯಾದಂತಹ ಕನ್ನಡವನ್ನು ಗೌರವಿಸಬೇಕು. ಮೊದಲು ನಾವು ಕಲಿಯಬೇಕು. ನಾವು ಇತರರಿಗೆ ಕಲಿಸುವ ಕೆಲಸ ಮಾಡಬೇಕು. ಅದನ್ನು ಬರೆಯುವುದು. ಓದುವುದರಲ್ಲಿ ಪ್ರಮುಖರಾಗಬೇಕಿದೆ. ಹೊರ ದೇಶದಿಂದ ಅವರ ರಾಜ್ಯದಿಂದ ಬಂದಂತಹ ಜನಗಳಿಗೆ ಕನ್ನಡ ಕಲಿಯುವುದು ಕಷ್ಟವೇ ಎನಿಸುತ್ತಿಲ್ಲ. ಅಂತಹದರಲ್ಲಿ ನಮ್ಮ ತಾಯಿನುಡಿಯಾದಂತಹ ಕನ್ನಡವನ್ನು ನಮ್ಮವರೇ ಯಾಕೆ ಜರಿಯಬೇಕು. ಪ್ರತಿಯೊಬ್ಬರ ಮನಸ್ಸಿನಿಂದ ಕನ್ನಡಾಂಬೆಯ



ಸೇವೆಯನ್ನು ಮಾಡಬೇಕೆಂಬ ಆಸೆಯನ್ನು ಹೊಂದಿದ್ದು. ಜೀವಿಸಿದರೆ ಪ್ರತಿ ಮನೆ ಮನೆಗಳಲ್ಲೂ ಕನ್ನಡಾಂಬೆಯ ಪ್ರಾಮುಖ್ಯತೆಯನ್ನು ಅರಿತರೆ . ಎಲ್ಲರಿಗೂ ಕನ್ನಡದ ಅರಿವನ್ನು ಮೂಡಿಸುತ್ತ. ಕನ್ನಡದ ಉಳಿವಿಗಾಗಿ ಕಾರ್ಯಗಳನ್ನು ಮಾಡಿದರೆ. ಪ್ರಸ್ತುತ ದಿನಮಾನಗಳಲ್ಲಿ ಕನ್ನಡವನ್ನು ಉಳಿಸಬಹುದು.

ಇಂದು ಕನ್ನಡದ ಪರವಾಗಿ ಎಷ್ಟು ಸಂಘ-ಸಂಸ್ಥೆಗಳು ಕಾರ್ಯವನ್ನು ನಿರ್ವಹಿಸುತ್ತಿವೆ. ಕನ್ನಡ ರಾಜ್ಯೋತ್ಸವದಂದು ಲೆಕ್ಕವಿಲ್ಲದಷ್ಟು ಕಾರ್ಯಕ್ರಮಗಳನ್ನು ಆಯೋಜಿಸಿಕೊಳ್ಳುತ್ತಿದ್ದಾರೆ. ಅದು ಅಂದಿಗೆ ಸೀಮಿತವಾಗದೆ. ನಮ್ಮ ಮುಂದಿನ ಪೀಳಿಗೆಯ ಮಕ್ಕಳಿಗೆ ಕನ್ನಡದ ಅರಿವು, ಉಳಿವಿನ ಬಗ್ಗೆ ತಿಳಿಸುತ್ತಾ ಮುಂದಿನ ಭವಿಷ್ಯದ ಉತ್ತಮ ಪ್ರಜೆಯನ್ನಾಗಿ ಮಾಡಲು ಅವಕಾಶವಾಗುತ್ತದೆ. ಕನ್ನಡಕ್ಕೆ ಕೈ ಎತ್ತುತ್ತ ಪ್ರತಿಯೊಬ್ಬರೂ ಕನ್ನಡಕ್ಕಾಗಿಯೇ ಸೇವೆ ಸಲ್ಲಿಸುವ ಮನೋಭಾವ ಒಳಗೊಂಡಿದ್ದು. ಕನ್ನಡವೇ ಉಸಿರಿ ಎಂದು ಜೀವಿಸುತ್ತಿರುವ ಕನ್ನಡದ ಅಭಿಮಾನಿಗಳೇ ಈ ಕಾರ್ಯಗಳನ್ನು ಮಾಡಬೇಕಿದೆ.

ನಮ್ಮ ಕನ್ನಡ ನಮ್ಮ ಹೆಮ್ಮೆ. ಇಂತಹ ಕನ್ನಡವನ್ನು ಸಂತಸದಲ್ಲಿ ಖುಷಿಯಿಂದ ಮಾತನಾಡಬೇಕು. ನಮ್ಮ ಕನ್ನಡ ಭಾಷೆಯು ಕಲಿಯಲು ಸಹ ಬಹಳ ಸರಳವಾದದ್ದು. ಎಂತಹವರು ಬೇಕಾದರೂ ಕಲಿಯುವಂತಹ ರೀತಿಯ ಪ್ರಕ್ರಿಯೆಯನ್ನು ಒಳಗೊಂಡಿದೆ.

ಕನ್ನಡವೇ ನಮ್ಮ ಉಸಿರಾಗಿರಲಿ
ಮರೆಯದಿರಿ ಕನ್ನಡವನ್ನು
ಜರಿಯದಿರಿ ನಮ್ಮವರನ್ನು
ಅವಕಾಶ ನೀಡಿರಿ ಎಲ್ಲೆಡೆ
ಪರಭಾಷೆ ತಳ್ಳಿರಿ ಮೂಲೆಗೆ
ನೀಡಿರಿ ಕೆಲಸದ ಅವಕಾಶ ನಮ್ಮವರಿಗೆ
ಆರ್ಥಿಕವಾಗಿ ಪ್ರಬಲಗೊಳ್ಳಿಸಿರಿ ನಮ್ಮವರನ್ನು
ದೇಶದ ಉದ್ದಾರಕ್ಕೆ ಕರ್ನಾಟಕ ಬಲಗೊಳ್ಳಲಿ
ಪ್ರೀತಿ- ಪ್ರೇಮ- ಸೌಹಾರ್ದ ಎಲ್ಲರಲ್ಲೂ ಮೂಡಲಿ
ಕನ್ನಡವೇ ನಮ್ಮಮ್ಮ ಎಂದು ತಿಳಿಯಮ್ಮ
ಅವಳಿಗೆ ಕೈ ಮುಗಿಯುತ ನಡೆಯಮ್ಮ
ಎಂದು ಹೇಳುತ್ತಾ ಕನ್ನಡಾಂಬೆಗೆ ಜೈ ಎನ್ನುವೆ
ಜೀವನಪೂರ್ತಿ ಅವಳ ಸೇವೆ ಮಾಡುವೆ........

ನಾವು ಹುಟ್ಟಿರುವುದು ನಮ್ಮ ಕರ್ನಾಟಕದ ನೆಲದಲ್ಲಿ. ಕನ್ನಡಾಂಬೆಯೇ ನನ್ನ ತಾಯಿಯಾದರೆ ತಾಯಿ ಭಾಷೆ ಕನ್ನಡವಾದ ಮೇಲೆ ಕನ್ನಡಕ್ಕೆ ಚಿರಋಣಿಯಾಗಬೇಕೆ ಹೊರತು. ನಮ್ಮ ಕನ್ನಡ ನಾಡಿಗೆ ಎಂದಿಗೂ ದ್ರೋಹವನ್ನು ಬಗೆಯುವ ಕೆಲಸ ಮಾಡಬಾರದು. ನಮ್ಮ ನೆಲ, ನಮ್ಮ ಜಲ, ನಮ್ಮ ಗಾಳಿ ಕನ್ನಡದಿಂದ ಕೂಡಿದೆ. ನಾವು ಎಂದೆಂದಿಗೂ ನಮ್ಮ ಕರುನಾಡಿಗೆ ಕೃತಜ್ಞರಾಗಬೇಕು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248